ಶ್ರೀ ಜಿ. ರಾಜುಗೌಡ : ಸ್ಪಷ್ಟವಾದ ಧೋರಣೆ ಸರ್ಕಾರದಲ್ಲಿಲ್ಲ. ಮುಚ್ಚುಮರೆ ಏನಿಲ್ಲ ಇದರಲ್ಲಿ. ಪೋಲೀಸರ ಸಹಾಯ ತೆಗೆದುಕೊಳ್ಳಬೇಕಾದ ಪರಿಸ್ಥಿತಿ ಇದೆ ಎಂದರೆ ತಾವು ದೃಢನಿರ್ಧಾರ ಮಾಡಿದ್ದೀರಾ. ಯಾವಾಗ ತೆರವು ಮಾಡಿಸುತ್ತೀರಿ ಹೇಳಿ. ನಾನು ಕೇಳುವುದು ಇಷ್ಟೆ. ದಯಮಾಡಿ ಬಿತ್ತನೆ ಕಾರ್ಯ ನಿಲ್ಲಿಸುವ ವ್ಯವಸ್ಥೆ ಮಾಡುತ್ತೀರಾ? ಖಾಯಂ ಆಗಿ ಶಿಬಿರ ಏರ್ಪಡಿಸಿ. ಆ ಕೆಲಸ ನೀವು ಮಾಡುತ್ತಿಲ್ಲ. ಯಾವಾಗ ಮಾಡುತ್ತೀರಿ ಹೇಳಿ.

ಶ್ರೀ ಹೆಚ್. ವಿಶ್ವನಾಥ್ : ಮಾಡುತ್ತೇವೆ.

ಶ್ರೀ ಜಿ. ರಾಜುಗೌಡ : ಯಾವಾಗ ಮಾಡುತ್ತೀರಿ?

ಶ್ರೀ ಹೆಚ್. ವಿಶ್ವನಾಥ್ : ಸರ್ಕಾರ ನಿರ್ಧಾರ, ದೃಢನಿರ್ಧಾರ, ಗಟ್ಟಿ ನಿರ್ಧಾರ ಎಲ್ಲ ನಿರ್ಧಾರಗಳನ್ನೂ ತೆಗೆದುಕೊಂಡಿದೆ.

ಎಸ್.ಎಸ್.ಎಲ್.ಸಿ. ಪರೀಕ್ಷಾ ಮಂಡಳಿಯಲ್ಲಿ ಕಾರ್ಯದ ಒತ್ತಡ

390 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ರಾಜ್ಯದಲ್ಲಿ ಎಸ್ಎಸ್ಎಲ್ಸಿ ಪರೀಕ್ಷೆಗಾಗಿ ಸುಮಾರು 6 ಲಕ್ಷ ಅಭ್ಯರ್ಥಿಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಎಸ್ಎಸ್ಎಲ್ಸಿ ಪರೀಕ್ಷೆಯಲ್ಲಿ 1 ಲಕ್ಷಕ್ಕಿಂತಲೂ ಹೆಚ್ಚು ಅಭ್ಯರ್ಥಿಗಳು ಇದ್ದರೆ ಇನ್ನೊಂದು ಪರೀಕ್ಷಾ ಮಂಡಳಿ ಕೇಂದ್ರವನ್ನು ಏರ್ಪಾಡು ಮಾಡಬೇಕೆಂದು ಕಾನೂನು ಇರುವುದು ನಿಜವೇ?*

ಇ) *ನೆರೆಯ ರಾಜ್ಯಗಳಾದ ಮಹಾರಾಷ್ಟ್ರ, ತಮಿಳುನಾಡು, ಆಂಧ್ರಪ್ರದೇಶಗಳಲ್ಲಿ ಬೇರೆ ಬೇರೆ ವಿಭಾಗಗಳಲ್ಲಿ ಬೇರೆ ಬೇರೆ ಕೇಂದ್ರಗಳಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಟ್ಟಿಲ್ಲವೇ?*

ಈ) *ಒಬ್ಬ ಅಭ್ಯರ್ಥಿ ಗುಲ್ಬರ್ಗಾ, ಬೀದರ್, ರಾಯಚೂರು ಬೆಳಗಾಂದಿಂದ ಅಂಕಪಟ್ಟಿ ಕಳೆದರೆ ಪರೀಕ್ಷಾ ಕೇಂದ್ರ ಬೆಂಗಳೂರಿಗೆ ಬರಬೇಕಾದರೆ ಬೆಂಗಳೂರಿಗೆ ಬಂದು ಹೋಗಲು ಕನಿಷ್ಟ 1000-00 ರೂ. ವೆಚ್ಚವಾಗುವುದು ಬಡರೈತರು ಭರಿಸಬಹುದೇ?*

ಉ) *ಇದರಿಂದ ಆ ಹಿಂದುಳಿದ ಭಾಗದ ಸಾವಿರಾರು ವಿದ್ಯಾರ್ಥಿಗಳ ವಿದ್ಯಾಭ್ಯಾಸವೇ ಸ್ಥಗಿತಗೊಳ್ಳುವುದಿಲ್ಲವೇ?*

ಊ) *ಆದಕ್ಕಾಗಿ ಗುಲ್ಬರ್ಗಾ ಬೆಳಗಾಂ ಧಾರವಾಡ ವಿಭಾಗಗಳಲ್ಲಿ ಎಸ್ಎಸ್ಎಲ್ಸಿ ಪರೀಕ್ಷೆ ಕೇಂದ್ರ ಮಂಡಳಿಗಳನ್ನು ಏರ್ಪಾಡು ಮಾಡಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಳ್ಳಲು ಸೂಕ್ತ ಕ್ರಮ ಕೈಗೊಳ್ಳಲಾಗುವುದೇ?*

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ) ಬಂದಿದೆ

ಆ) ಇಲ್ಲ

ಇ) ಮಾಹಿತಿ ಲಭ್ಯವಿಲ್ಲ

ಈ) ಅಂಕಪಟ್ಟಿ ಕಳೆದುಕೊಂಡಂತಹ ವಿದ್ಯಾರ್ಥಿಗಳು ನಿಗಧಿತ ಶುಲ್ಕವನ್ನು ಮತ್ತು ಅರ್ಜಿಯನ್ನು ಸಂಬಂಧಿಸಿದ ಶಾಲೆಯ ಮುಖಾಂತರ ಮಂಡಳಿಗೆ ಕಳುಹಿಸಿದಲ್ಲಿ ಅಂತಹವರಿಗೆ ನಕಲು ಅಂಕಪಟ್ಟಿಯನ್ನು ಸಂಬಂಧಿಸಿದ ಶಾಲೆಗೆ ಕಳುಹಿಸಲಾಗುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಬೆಂಗಳೂರಿಗೆ ಬರುವ ಅವಶ್ಯಕತೆ ಇಲ್ಲ.

ಊ) ಉದ್ಭವಿಸುವುದಿಲ್ಲ.

ಋ) ಉದ್ಭವಿಸುವುದಿಲ್ಲ.

10.50 ಎ.ಎಂ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ : ಮಾನ್ಯ ಅಧ್ಯಕ್ಷರೆ, ನಾನು ಎಸ್ಎಸ್ಎಲ್ಸಿ ಕೇಂದ್ರದ ಶಾಖೆಗಳ ಬಗ್ಗೆ ನೆರೆರಾಜ್ಯಗಳಾದ ಮಹಾರಾಷ್ಟ್ರ, ತಮಿಳುನಾಡು, ಆಂಧ್ರಪ್ರದೇಶ ರಾಜ್ಯಗಳಂತೆ ಬೇರೆ ಬೇರೆ ವಿಭಾಗಗಳಲ್ಲಿ ಬೇರೆ ಬೇರೆ ಕೇಂದ್ರಗಳನ್ನು ಮಾಡಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡುವುದಿಲ್ಲವೇ ಅಂದರೆ ಆ ಮಾಹಿತಿ ಲಭ್ಯವಿಲ್ಲವೆಂದು ಹೇಳಿದ್ದೀರಿ. ಒಬ್ಬ ವಿದ್ಯಾರ್ಥಿ ಗುಲ್ಬರ್ಗ, ರಾಯಚೂರು, ಬೀದರ್‌ನಿಂದ ಬೆಂಗಳೂರಿಗೆ ಬರಬೇಕಾದರೆ ಕನಿಷ್ಟ 1 ಸಾವಿರ ರೂಪಾಯಿ ಖರ್ಚಾಗುತ್ತದೆ. ಅಂಕಪಟ್ಟಿಯನ್ನು ಕಳೆದುಕೊಂಡರೆ ನಿಗದಿತ ಅರ್ಜಿಫಾರಂನಲ್ಲಿ ಶುಲ್ಕವನ್ನು ತುಂಬಿ ಸಂಬಂಧಿಸಿದ ಶಾಖೆಯಿಂದ ಮಂಡಳಿಗೆ ಕಳುಹಿಸಿದರೆ ಅಂತಹವರಿಗೆ ನಕಲು ಅಂಕಪಟ್ಟಿಯನ್ನು ಸಂಬಂಧಪಟ್ಟ ಶಾಲೆಗಳಿಗೆ ಕಳುಹಿಸಲಾಗುವುದೆಂದು ತಿಳಿಸಿದ್ದಾರೆ. ಅಂಕಪಟ್ಟಿ ಕಳೆದುಹೋದರೆ ಮತ್ತು ಅದನ್ನು ಪಡೆಯುವವರೆಗೆ ಹೆಚ್ಚು ಹೆಚ್ಚು ಸಂಖ್ಯೆಯ ವಿದ್ಯಾರ್ಥಿಗಳಿಗೆ ಆ ವೇಳೆಯಲ್ಲಿ ಅಂಕಪಟ್ಟಿ ಸಿಗದ ಕಾರಣ ಸಂದರ್ಶನ ಹಾಗೂ ಮುಂದಿನ ವಿದ್ಯಾಭ್ಯಾಸದ ಪ್ರವೇಶ ತಪ್ಪಿ ವಿದ್ಯಾರ್ಥಿಗಳ ಜೀವನವೇ ಹಾಳಾಗಿದೆ. ಅದಕ್ಕಾಗಿ ಗುಲ್ಬರ್ಗ, ಬೀದರ್, ಬೆಳಗಾಂನಿಂದ ಅಂಕಪಟ್ಟಿ ಪಡೆಯಲು ವಿದ್ಯಾರ್ಥಿಗಳು ಬಂದು ಹೋದರೆ ಕನಿಷ್ಟ 1 ಸಾವಿರ ರೂಪಾಯಿ ಖರ್ಚಾಗುತ್ತದೆ. ನಮ್ಮ ರಾಜ್ಯದಲ್ಲಿ ಸುಮಾರು 6 ಲಕ್ಷ ಎಸ್ಎಸ್ಎಲ್ಸಿ. ವಿದ್ಯಾರ್ಥಿಗಳು ಇದ್ದ ಕಾರಣ, ಮಹಾರಾಷ್ಟ್ರ ಮದ್ರಾಸ್ ಮತ್ತು ಆಂಧ್ರಪ್ರದೇಶಗಳಲ್ಲಿರುವಂತೆ ನಮ್ಮ ರಾಜ್ಯದಲ್ಲಿಯೂ ಸಹ ಶಾಖೆಗಳನ್ನು ಏರ್ಪಾಡು ಮಾಡಿ ಗುಲ್ಬರ್ಗ, ಬೆಳಗಾಂದಲ್ಲಿ ಶಾಖೆಗಳನ್ನು ಏರ್ಪಾಟು ಮಾಡಿ ಆ ಶಾಖೆಗಳಲ್ಲಿ ಮಾರ್ಕ್ಸ್‌ಲಿಸ್ಟ್ ಮತ್ತು ಚೇಂಜ್ ಆಫ್ ಸೆಂಟರ್ಸ್ ವ್ಯವಸ್ಥೆ ಮಾಡಿ ಪೇಪರ್‌ಗಳನ್ನು ಮಾತ್ರ ಕೇಂದ್ರದಿಂದ ಮಾಡುವ ವ್ಯವಸ್ಥೆ ಮಾಡಿದರೆ ಬಡ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಟ್ಟ ಹಾಗೆ ಆಗುವುದಿಲ್ಲವೆ?

ಶ್ರೀ ಎಸ್.ಎಂ. ಯಾಹ್ಯ : ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಯಾವ ಒಂದು ವ್ಯವಸ್ಥೆಯಿದೆ ಅದು ಸಂಪೂರ್ಣವಾಗಿ ಬಡ ವಿದ್ಯಾರ್ಥಿಗಳಿಗೆ ಸಹಾಯಕವಾಗಿರುವಂತಹದ್ದು ಇದೆ. ನಾವು ಬೇರೆ ಬ್ರಾಂಚ್‌ಗಳನ್ನು ತೆರೆದುಕೊಂಡು ಮತ್ತೆ ಬೋರ್ಡ್‌ಗಳನ್ನು ಮಾಡಿದರೆ ಅದಕ್ಕೆ ಹೆಚ್ಚು ಹಣ ಖರ್ಚಾಗುತ್ತದೆ, ಸಿಬ್ಬಂದಿ ಹೆಚ್ಚು ಆಗುತ್ತದೆ, ಇನ್ನೂ ಡಿಲೇಯಾಗುವುದಕ್ಕೆ ಕಾರಣವಾಗುತ್ತದೆ. ಅದಕ್ಕೆ ನೀವು ಪ್ರಿನ್ಸಿಪಾಲರಿಗೆ ಅರ್ಜಿಯನ್ನು ಕೊಡಬಹುದು, ಬೆಂಗಳೂರಿಗೆ ಬರಬೇಕಾಗಿಲ್ಲ, 1 ಸಾವಿರ ರೂಪಾಯಿ ಖರ್ಚು ಮಾಡಬೇಕಾಗಿಲ್ಲ. ಅಲ್ಲಿ ನೀವು ಅರ್ಜಿಯನ್ನು ಕೊಟ್ಟರೆ ಪ್ರಿನ್ಸಿಪಾಲರ ಜವಾಬ್ದಾರಿ, ಎಲ್ಲಿಯಾದರೂ ಮಾರ್ಕ್ಸ್‌ಲಿಸ್ಟ್ ಹಾಳಾಗಿಬಿಟ್ಟರೆ ಅವರಿಗೆ ನಕಲು ಅಂಕಪಟ್ಟಿ ಕೊಡುವಂತಹ ವ್ಯವಸ್ಥೆ ಮಹಾರಾಷ್ಟ್ರಕ್ಕಿಂತಲೂ, ಇತರ ರಾಜ್ಯಗಳಿಗಿಂತಲೂ ಉತ್ತಮವಾದ ವ್ಯವಸ್ಥೆ ನಮ್ಮ ಕರ್ನಾಟಕ ರಾಜ್ಯದಲ್ಲಿದೆ. ಇದನ್ನು ಇನ್ನೂ ಬಿಗಿಯಾಗಿ ಮಾಡಿ ಆದಷ್ಟು ಬೇಗ ಮಾರ್ಕ್ಸ್‌ಕಾರ್ಡ್‌ಗಳನ್ನು ಕೊಡಲಿಕ್ಕೆ ಸರ್ಕಾರ ಎಲ್ಲ ಸಿದ್ಧತೆಗಳನ್ನು ಮಾಡುತ್ತದೆಂದು ಮಾನ್ಯ ಶಾಸಕರಿಗೆ ಹೇಳಬಯಸುತ್ತೇನೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ : ನಾನು ಆಗಲೇ ಹೇಳಿದಹಾಗೆ ಬಹುತೇಕ ವಿದ್ಯಾರ್ಥಿಗಳು ಸರಿಯಾದ ಸಮಯಕ್ಕೆ ಅಂಕಪಟ್ಟಿಗಳು ದೊರೆಯದೆ ಸಂದರ್ಶನ ಮತ್ತು ಮುಂದಿನ ವಿದ್ಯಾಭ್ಯಾಸದ ಪ್ರವೇಶ ಎಷ್ಟೋ ವಿದ್ಯಾರ್ಥಿಗಳಿಗೆ ತಪ್ಪಿ ಹೋಗಿದೆ. ನನ್ನ ತಮ್ಮನ ಮಗನಿಗೆ ಅಂಕಪಟ್ಟಿ ಕಳೆದುಹೋಗಿ ಅದನ್ನು ತರಿಸುವಲ್ಲಿ ಆದ ವಿಳಂಬದಿಂದ

ಒಂದು ವರ್ಷ ಹಾಳಾಯಿತು. ಶಾಲೆಯ ಮುಖಾಂತರ ಕಳುಹಿಸಿದರೂ ಕೂಡ ಸರಿಯಾದ ಸಮಯಕ್ಕೆ ಅಂಕಪಟ್ಟಿ ಸಿಗಲಿಲ್ಲ. ಕೊನೆಗೆ ಬೆಂಗಳೂರಿಗೆ ಬಂದು ತೆಗೆದುಕೊಂಡು ಹೋಗಬೇಕಾಯಿತು. ಆದ್ದರಿಂದ ಶಾಖೆಗಳನ್ನು ತೆರೆದು ಬೆಳಗಾಂ ಮತ್ತು ಗುಲ್ಬರ್ಗಗಳಲ್ಲಿ ಸಿಗುವಂತೆ ವಿರ್ಪಾಟು ಮಾಡಿದರೆ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ.

ಶ್ರೀ ಎಸ್.ಎಂ. ಯಾಹ್ಯ : ಸರ್ಕಾರದ ವಿಚಾರದ ಪ್ರಕಾರ ಶಾಖೆಗಳನ್ನು ಮಾಡಿದರೆ ಇನ್ನೂ ಹೆಚ್ಚು ತಡವಾಗಬಹುದು. ಹೊಸ ಸಮಸ್ಯೆಗಳು ಆಗುವುದಕ್ಕೆ ಸಾಧ್ಯವಾಗುತ್ತದೆಂದು ಹೇಳಿ, ಈಗಿನ ಪದ್ಧತಿಯನ್ನು ಇನ್ನೂ ಒಳ್ಳೆಯ ರೂಪಕ್ಕೆ ತರಲಿಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ.

ಪಾಂಡವಪುರ ಜನರಲ್ ಆಸ್ಪತ್ರೆಗೆ ಸಿಬ್ಬಂದಿ ಮಂಜೂರಾತಿ

116 - ಶ್ರೀ ಡಿ. ಹಲಗೇಗೌಡ (ಪಾಂಡವಪುರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಾಂಡವಪುರ ಜನರಲ್ ಆಸ್ಪತ್ರೆಗೆ ಸಿಬ್ಬಂದಿ ಮತ್ತು ಸಲಕರಣೆಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಆಸ್ಪತ್ರೆಗೆ ಬೇಕಾಗುವ ಸಿಬ್ಬಂದಿಗಳನ್ನು ಸರ್ಕಾರವು ಮಂಜೂರು ಮಾಡಿದೆಯೇ

ಇ) ಮಂಜಾರಾತಿಯಾಗಿದ್ದರೆ ಎಷ್ಟು ಜನ ಸಿಬ್ಬಂದಿಯನ್ನು ಯಾವ ಯಾವ ಹುದ್ದೆಗಳಿಗೆ ನೇಮಿಸಿರುತ್ತದೆ?

ಈ) ಸಾರ್ವಜನಿಕರ ಹಿತದೃಷ್ಟಿಯಿಂದ ಕೊರತೆ ಇರುವ ಸಿಬ್ಬಂದಿ ವರ್ಗ ಮತ್ತು ಸಲಕರಣೆಗಳನ್ನು ಸರ್ಕಾರದವರು ಶೀಘ್ರವಾಗಿ ಒದಗಿಸುವರೇ?

ಡಾ॥ ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಸಿಬ್ಬಂದಿ ಕೊರತೆಯಿರುವುದು ಗಮನಕ್ಕೆ ಬಂದಿದೆ.

ಆ) ಕನಿಷ್ಠ ಅವಶ್ಯಕ ಸಲಕರಣಗಳನ್ನು ಒದಗಿಸಲಾಗಿದೆ. ಆದರೆ ಇನ್ನೂ ಹೆಚ್ಚಿನ ಸಲಕರಣೆಗಳನ್ನು ಒದಗಿಸಲು ಆಸ್ಪತ್ರೆಯಿಂದ ಕೋರಿಕೆ ಬಂದಿದೆ.

ಇ) ಹೌದು.

ಈ) ಮಂಜಾರಾಗಿರುವ ಹುದ್ದೆಗಳ ಸಂಖ್ಯೆ -66 ಮತ್ತು ಅವುಗಳಲ್ಲಿ 49 ಹುದ್ದೆಗಳನ್ನು ತುಂಬಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಈ) ಖಾಲಿ ಇರುವ ಹುದ್ದೆಗಳನ್ನು ತುಂಬಲಾಗುವುದು. ಕೋರಿರುವ ಹೆಚ್ಚಿನ ವೈದ್ಯಕೀಯ ಸಲಕರಣೆಗಳನ್ನು ಒದಗಿಸಲು ಜಿಲ್ಲಾ ಪರಿಷತ್ತನ್ನು ಕೋರಲಾಗುವುದು.

ಅನುಬಂಧ

ಸಾರ್ವಜನಿಕ ಆಸ್ಪತ್ರೆ ಪಾಂಡವಪುರ ಇಲ್ಲಿಗೆ ಮಂಜೂರಾದ ಹುದ್ದೆಗಳು ಹಾಗೂ ಖಾಲಿ ಹುದ್ದೆಗಳ ವಿವರ

	ಹುದ್ದೆಗಳ ವಿವರ	ಮಂಜೂರಾದ ಹುದ್ದೆ	ಕಾರ್ಯನಿರ್ವಹಿಸುತ್ತಿರುವ ಹುದ್ದೆ	ಖಾಲಿ ಇರುವ ಹುದ್ದೆ
1)	ಕಛೇರಿ ಅಧೀಕ್ಷಕರು	1	1	_
2)	ಪ್ರ.ದ. ಸಹಾಯಕರು	3	2	1
3)	ದ್ವಿ.ದ. ಸಹಾಯಕರು	2	2	ವರ್ಗಾವಣೆಯಿಂದ ತೆರವಾಗಿದೆ